ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕಛೇರಿಯನ್ನು ಸ್ಥಳಾಂತರಿಸಿರುವುದು.

316(98)

ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯಲ್ಲಿರುವ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಆಡಳಿತ ಕಛೇರಿಯನ್ನು ಬೆಂಗಳೂರಿನಿಂದ ಯಾವಾಗ ಸ್ಥಳಾಂತರಿಸಲಾಯಿತು?

ಆ) ಈ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಕಛೇರಿಯನ್ನು ಬೆಂಗಳೂರಿನಲ್ಲಿಯೇ ಉಳಿಸಿಕೊಂಡಿರಲು ಕಾರಣಗಳೇನು?

ಇ) ಹಾಗಿದ್ದಲ್ಲಿ ವ್ಯವಸ್ಥಾಪಕ ನಿರ್ದೆಶಕರ ಕಛೇರಿಯನ್ನು ಹುಬ್ಬಳ್ಳಿಗೆ ವರ್ಗಾಯಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

Sri. M.MAHADEV (Minister for Sericulture and Textiles):

ಅ) ನವೆಂಬರ್ 1996ರಲ್ಲಿ ಸ್ಥಳಾಂತರಿಸಲಾಯಿತು.

ಆ) ಆಡಳಿತ ಕಛೇರಿಯನ್ನು ಸ್ಥಳಾಂತರಿಸಿದಾಗ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಕಛೇರಿಯನ್ನೂ ಸಹ ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸಲಾಗಿದ್ದು, ಇವರ ಕಛೇರಿಯು ಹುಬ್ಬಳ್ಳಿಯಲ್ಲಿಯೇ ಕಾರ್ಯ ನಿರ್ವಹಿಸುತ್ತಿದೆ.

ಇ) ಅನ್ವಯಿಸುವುದಿಲ್ಲ.

ಆಲೂರು ಪಟ್ಟಣ ಪಂಚಾಯ್ತಿಗೆ ಸಿಬ್ಬಂದಿ ಕೊರತೆ.

317(109)

ಶ್ರೀ ಶಿವಪ್ಪ ಬಿ.ಬಿ. (ಸಕಲೇಶಪುರ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಆಲೂರು ಪಟ್ಟಣ ಪಂಚಾಯ್ತಿಗೆ ಮಂಜೂರಾದ ಹುದ್ದೆಗಳು ಎಷ್ಟು? ವರ್ಗವಾರು ವಿವರ ನೀಡುವುದು.